**ಮೈಸೂರು ವಿಶ್ವವಿದ್ಯಾನಿಲಯ**

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್‌ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ವಿಶ್ವವಿದ್ಯಾನಿಲಯದ 99ನೇ ವಾರ್ಷಿಕ ಘಟಿಕೋತ್ಸವದ ಪೂರ್ವಭಾವಿಯಾಗಿ ದಿನಾಂಕ 17–03–2019 ರಂದು ಬೆಳಿಗ್ಗೆ 9.00 ಗಂಟೆಗೆ ಜರುಗಿದ ಸಿಂಡಿಕೇಟಿನ ವಿಶೇಷ ಸಭೆಯ ನಡವಳಿಗಳು.**

**ಹಾಜರಿದ್ದ ಸದಸ್ಯರು:**

| | | |
|---|---|---|
| 1. ಪ್ರೊ. ಜಿ. ಹೇಮಂತಕುಮಾರ್ | – | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. ಪ್ರೊ. ಮಹದೇವ | – | ಸದಸ್ಯರು |
| 3. ಕು. ಸಹನಾ ಶಿವಪ್ಪ | – | ಸದಸ್ಯರು |
| 4. ಡಾ. ರಾಜಗೋಪಾಲ್ | – | ಸದಸ್ಯರು |
| 5. ಡಾ. ಎಂ. ಪ್ರೀತಿ | – | ಸದಸ್ಯರು |
| 6. ಶ್ರೀ ಜಿ. ಅಶ್ವತನಾರಾಯಣ | – | ಸದಸ್ಯರು |
| 7. ಪ್ರೊ. ಕೆ.ಟಿ. ಅಪ್ಪಾಜಪ್ಪ | – | ಸದಸ್ಯರು |
| 8. ಪ್ರೊ. ಎ. ಬಾಲಸುಬ್ರಮಣಿಯನ್ | – | ಸದಸ್ಯರು |
| 9. ಪ್ರೊ. ಕೆ.ಎಂ. ಮಹದೇವನ್ ಕುಲಸಚಿವರು (ಪರೀಕ್ಷಾಂಗ) | – | ಸದಸ್ಯರು |
| 10. ಪ್ರೊ. ಲಿಂಗರಾಜ ಗಾಂಧಿ | – | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

**ಹಾಜರಾಗದ ಸದಸ್ಯರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಸನ್ಮಾನ್ಯ ಕುಲಪತಿಗಳು ಸಿಂಡಿಕೇಟ್‌ನ ವಿಶೇಷ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಆಹ್ವಾನಿಸಿದರು.

ಮುಂದುವರೆದು, ವಿಶ್ವವಿದ್ಯಾನಿಲಯದ 99ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿಗಳನ್ನು ಮತ್ತು ವಿವಿಧ ಕೋರ್ಸುಗಳ ಪದವಿಗಳನ್ನು ಪ್ರದಾನಿಸುವ ಸಲುವಾಗಿ ವಿಶ್ವವಿದ್ಯಾನಿಲಯದ ಎಲ್ಲಾ ನಿಕಾಯಗಳ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ದಪಡಿಸಿ, ಸಿಂಡಿಕೇಟ್‌ನ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

| | |
|---|---|
| **ವಿಷಯ ಸಂಖ್ಯೆ: 2019/3.1** | 1. Poojya Mata Amritanandamayi Devi ರವರಿಗೆ<br>2. Sri Sri Ma. Ni. Pra. Karivrashabha Deshikendra Shivayogishwara ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲು ಸಿಂಡಿಕೇಟಿನ ವಿಶೇಷ ಸಭೆಯ ಅನುಸಮರ್ಥನೆಗಾಗಿ |
| **ತೀರ್ಮಾನ:** | 1. Poojya Mata Amritanandamayi Devi ರವರಿಗೆ<br>2. Sri Sri Ma. Ni. Pra. Karivrashabha Deshikendra Shivayogishwara ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲು ಸನ್ಮಾನ್ಯ ಕುಲಾಧಿಪತಿಗಳು ಮತ್ತು ಕರ್ನಾಟಕ ರಾಜ್ಯದ ರಾಜ್ಯಪಾಲರು ಅನುಮೋದಿಸಿರುವುದನ್ನು ಸಿಂಡಿಕೇಟ್ ಗಮನಿಸಿತು ಹಾಗೂ ಅನುಸಮರ್ಥಿಸಿತು. |
| **ವಿಷಯ ಸಂಖ್ಯೆ: 2019/3.2** | 99ನೇ ವಾರ್ಷಿಕ ಘಟಿಕೋತ್ಸವದ ಅಭ್ಯರ್ಥಿಗಳ ಪಟ್ಟಿಯನ್ನು ಅನುಮೋದಿಸುವ ಬಗೆಗೆ. |
| **ತೀರ್ಮಾನ:** | 99ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿವಿಧ ಪದವಿಗಳನ್ನು ಪ್ರದಾನಿಸುವ ಸಲುವಾಗಿ ಮಂಡಿಸಿರುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿಂಡಿಕೇಟ್ ಒಮ್ಮತದಿಂದ ಅನುಮೋದಿಸಿತು. |

ಕೊನೆಯಲ್ಲಿ ಅಧ್ಯಕ್ಷರು ಎಲ್ಲರಿಗೂ ವಂದಿಸಿ, ಘಟಿಕೋತ್ಸವದ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಲು ಎಲ್ಲಾ ಸದಸ್ಯರು ಸಹಕರಿಸಬೇಕೆಂದು ಕೋರುತ್ತಾ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–
**ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ**

ಸಹಿ/–
**ಕುಲಪತಿ ಹಾಗೂ ಅಧ್ಯಕ್ಷರು**